ಹನ್ನಾಳಿಗೆ ಈ ವಿಚಾರ ಕೊಂಚ ಒಳಮಂಥನಕ್ಕೆ ಆಸ್ಪದಕೊಟ್ಟಂತೆ ಕೆಲವು ನಿಮಿಷ ಮೌನ ವಹಿಸಿದಳು. ಅವಳ ವ್ಯಾಪ್ತಿಗೆ ಬರದ ವಿಚಾರವಾದರೂ ಪದೇ ಪದೇ ತಮ್ಮ ಕರ್ತವ್ಯಕ್ಕೆ ಭಂಗ ಉಂಟಾಗುವ ಸನ್ನಿವೇಶಗಳು ಎದುರಾಗುತ್ತಿರುವುದರಿಂದ, ಇದಕ್ಕೊಂದು 'ಪರಿಹಾರ' ಸಿಗಲೇಬೇಕಿದೆ ಎಂದು ತನ್ನ ಇಂಗಿತ ವ್ಯಕ್ತಪಡಿಸಿದಳು.

ಆದರೆ ಅವಳ ಸುದೀರ್ಘ ಮೌನದ ಬಳಿಕ ನುಡಿದ ಮಾತುಗಳು ನಿಯಂತ್ರಣ ಕೇಂದ್ರದ ಮುಖ್ಯಸ್ಥನ ಕಿವಿಗೆ ಬೀಳದೆ ಅವರ ಒಂದು ತಿಂಗಳ ಸಂಚಾರದ ವಿಶ್ಲೇಷಣೆಯಿಂದ ಹೊರಹೊಮ್ಮಿದ ಮಾಹಿತಿಯ ಕಡೆ ಗಮನ ಹರಿಸಿದ್ದ. ತನ್ನ ಕ್ಯಾಬಿನ್‌ಗೆ ಅಂಟಿಕೊಂಡಿದ್ದ ಮಿನಿ ಸಭಾಂಗಣಕ್ಕೆ ಹನ್ನಾಳನ್ನು ಕರೆದೊಯ್ದು ಕಂಪ್ಯೂಜೆಕ್ಟರ್ ಬಿಂಬಿಸಿದ ಅಂಕಿ ಅಂಶಗಳನ್ನು ಬೃಹತ್ ಪರದೆ ಮೇಲೆ ತೋರ್ಪಡಿಸುತ್ತಾ ವಿವರಿಸಿದ.

ನಮ್ಮಲ್ಲಿ ಅಪಘಾತ ಪ್ರಕರಣಗಳು ಹಾಗೂ ನಂತರ ಆ ಅಪಘಾತದಲ್ಲಿ ಪಾಲ್ಗೊಂಡ ನೊಂದವರು ಹಾಗೂ ಆರೋಪಿತರ ವಿವರಗಳನ್ನು ಪರಿಶೀಲಿಸಿದಾಗ ದಿನದಿಂದ ದಿನಕ್ಕೆ ಪ್ರಕರಣಗಳು ಹೆಚ್ಚಾಗುತ್ತಿವೆ. ಇದಕ್ಕೆ ಸಮಾನಾಂತರವಾಗಿ ನೊಂದವರು ಹಾಗೂ ಆರೋಪಿತರ ಸಂಖ್ಯೆ ಸಹ ಹೆಚ್ಚಾಗುತ್ತಿದೆ ಎಂಬುದು ತಿಳಿದು ಬಂದಿದೆ. ವಾಯು ಹಾಗೂ ಬುಲೆಟ್ ಮೆಟ್ರೊ ಸಂಚಾರಕ್ಕೆ ಹೋಲಿಸಿದಾಗ ರಸ್ತೆ ಸಂಚಾರದಲ್ಲಿ ವಿಪರೀತ ಪ್ರಕರಣಗಳು ದಾಖಲಾಗಿವೆ. ಆದರೆ ಮೊನ್ನೆ ಮೊನ್ನೆ ನಡೆದ ಅವಘಡದಿಂದ ಬುಲೆಟ್ ಮೆಟ್ರೊ  ಸಂಚಾರದಲ್ಲಿನ ಅಪಘಾತ ಪ್ರಕರಣಗಳ ಸಂಖ್ಯೆಯಲ್ಲಿ ಗಣನೀಯ ಹೆಚ್ಚಳವಾಯ್ತು...'

'ಈ ಅಂಕಿ ಅಂಶಗಳಿಂದ ನನ್ನ ಕಾರ್ಯ ನಿರ್ವಹಣೆಯಲ್ಲಿ ಏನಾದರೂ ಬದಲಾವಣೆ ಮಾಡಬೇಕಿದೆಯೇ ಅಥವಾ ಪರಿಸ್ಥಿತಿ ಇನ್ನೂ ಉತ್ತಮಪಡಿಸಲು ನಾನೇನು ಮಾಡಬೇಕಿದೆ ಎಂದು ಸೂಚಿಸುವಿರಾ?'

'ಚಾಲಕನ ಬುದ್ಧಿಮತ್ತೆಯು ಹೇಗೆ ಹಲವಾರು ವರ್ಷಗಳಿಂದ ವಿಕಾಸ ಹೊಂದಿತ್ತೆಂಬುದನ್ನು ಮನನ ಮಾಡಿದಾಗ ನಮಗೆ ಈ ಅಪಘಾತಗಳನ್ನು ತಪ್ಪಿಸುವ ಸೂತ್ರವನ್ನು ಕಂಡು ಹಿಡಿಯಲು ಸಾಧ್ಯವಾದೀತು. ಆದರೆ ಈ ಸೂತ್ರ ಕಂಡುಹಿಡಿಯುವ ವಿಷಯವನ್ನು ಸಂಶೋಧನಾತಂಡಕ್ಕೆ ನೀಡುತ್ತಿದ್ದೇವೆ. ನಿಮಗೆ ಇಲ್ಲಿ ತೋರಿಸುವ ದೃಶ್ಯಗಳಿಂದಾಗಿ ನೀವು ಇಂಥಹ ಸಂದರ್ಭದಲ್ಲಿ ಏನು ಮಾಡಬೇಕಿದೆ ಎಂಬುದರ ಅರಿವು ಮೂಡಿಸಲೋಸುಗ ತೋರಿಸುತ್ತಿದ್ದೇವೆ...' ಎಂದು ಮುಂದುವರೆಯುತ್ತಾ ವಿವಿಧ ವಯೋಮಾನದ ವ್ಯಕ್ತಿಗಳು ವಾಹನ ಚಾಲನೆ ಮಾಡುವಾಗಿನ ತಪ್ಪುಗಳ ತುಣುಕುಗಳನ್ನು ತೋರಿಸುತ್ತಾ ಹೋದರು.

ಜೊತೆಜೊತೆಗೆ ವಾರ್ಡನ್‌ಗಳ ಪ್ರತಿಕ್ರಿಯೆ ಹಾಗೂ ತೆಗೆದುಕೊಳ್ಳಬೇಕಾದ ಕ್ರಮಗಳ ತುಣುಕುಗಳನ್ನು ತೋರಿಸಿ ವಿವರಿಸುತ್ತಾ ಹೋದರು. ಅದನ್ನು ವೀಕ್ಷಿಸಿದಾಗ ಹನ್ನಾಳಿಗೆ ಅನಿಸಿದ್ದೊಂದೇ, 'ಎಷ್ಟೇ ಪ್ರಾತ್ಯಕ್ಷಿಕೆ ತೋರಿಸಿದರೂ ಅನುಭವದ ಮುಂದೆ ಇದೇನೂ ಅಲ್ಲಾ...' ಆದರೆ ಅವಳ ಬಾಯಿಂದ ಹೊರಟಿದ್ದೇ ಬೇರೆ ನುಡಿಗಳು.

'ಒಬ್ಬೊಬ್ಬರಿಗೂ ಇದನ್ನೆಲ್ಲಾ ತೋರಿಸುವುದರ ಬದಲು ನಮ್ಮ ವಾಕಿ ಸಂಚಾರ ವಾರ್ಡನ್ ಗ್ರೂಪ್‌ಗೆ ಪೋಸ್ಟ್ ಮಾಡಿಬಿಡಿ. ಬಿಡುವಿದ್ದಾಗ ನಿಧಾನವಾಗಿ ಅದನ್ನು ವೀಕ್ಷಿಸಿ ಮನನ ಮಾಡಿಕೊಂಡರಾಯಿತು.'

'ಓ... ಶ್ಯೂರ್. ನಿಮಗೀಗ ಸಮಯವಿಲ್ಲದಿದ್ದರೇನಂತೆ, ಈ ಮಾಬ್ ವರ್ತನೆಯ ಬಗ್ಗೆ ತಮ್ಮ 'ಆರ್ ಆಂಡ್ ಡಿ' ವಿಭಾಗಕ್ಕೂ ಮಾಹಿತಿ ರವಾನೆ ಮಾಡ್ತಿದ್ದೀವಿ. ಅವರೇನಾದರೂ ಇದಕ್ಕೆ ಪರಿಹಾರ ಕಂಡು ಹಿಡಿದರೆ ಅವಿರತ್ ಹಾಗೂ ಟೀಂನ ತನಿಖಾ ತಂಡದ ಕೆಲಸ ಸುಗಮವಾಗುತ್ತೆ.' ಅವನು ಅವಿರತ್‌ನ ಹೆಸರು ಉಸುರುತ್ತಿದ್ದಂತೆ ಅವಳ ಕಿವಿಗಳು ಚುರುಕಾದವು.

'ಅವರಿಗೆ ಹೇಗೆ ಅನುಕೂಲವಾಗುತ್ತೆ?'

ಮನುಷ್ಯನ ವರ್ತನೆಯು ವಿವಿಧ ಸಂದರ್ಭಗಳಲ್ಲಿ ಭಿನ್ನವಾಗಿರುತ್ತದೆ. ಈ ಅಪಘಾತಗಳಾಗುವುದು ಹಲವಾರು ಸಂದರ್ಭಗಳಲ್ಲಿಯಾದರೂ ಒಬ್ಬೊಬ್ಬ ವ್ಯಕ್ತಿಯ ಸ್ವಭಾವ ಭಿನ್ನವಾಗಿರುತ್ತೆ. ಇದನ್ನೆಲ್ಲಾ 'ಆರ್ ಆಂಡ್ ಡಿ' ವಿಭಾಗ ಅಧ್ಯಯನ ಮಾಡಿ ಸಮಸ್ಯೆ ಬಗೆಹರಿಸಲು ಮಾರ್ಗೋಪಾಯಗಳನ್ನು ಸೂಚಿಸಿದರೆ ಅಪಘಾತಗಳು ಸಾಕಷ್ಟು ಕಡಿಮೆಯಾಗುತ್ತವೆ. ಪ್ರಕರಣಗಳು ಕಡಿಮೆಯಾದರೆ ತನಿಖಾ ತಂಡದ ಕೆಲಸ ಸಹಜವಾಗಿ ಸುಲಭವಾದಂತೆ ತಾನೆ...' ವಿವರಿಸಿದ್ದ.

ಹನ್ನಾ ಅದಕ್ಕೆ ಒಪ್ಪಿಕೊಳ್ಳಲೇಬೇಕಿತ್ತು. ಹೊರಡುವಾಗ ಸಮೀಪದಲ್ಲೇ ಇದ್ದ 'ಆರ್ ಅಂಡ್ ಡಿ' ಕಟ್ಟಡಕ್ಕೂ ಭೇಟಿ ನೀಡಿದರಾಯ್ತೆಂದು ಅವಳ ಕಾಲ್ಗಳು ಅತ್ತ ಹೆಜ್ಜೆ ಹಾಕಿದವು. ಆತ್ಮೀಯರೊಬ್ಬರ ಭೇಟಿ ನೀಡುವ ಮುದಕ್ಕಾಗಿ ಅವಳು ಕಾತರಳಾಗಿದ್ದಳು. ತನ್ನ ಅನಿರೀಕ್ಷಿತ ಆಗಮನ ಆ ವ್ಯಕ್ತಿಯ ಮುಖದಲ್ಲಿ ಎಂತಹ ಅಚ್ಚರಿ ತರಬಹುದೆಂಬುದನ್ನು ನೋಡುವುದೇ ಚೆಂದವಿತ್ತು.

ಅವಳ ಉತ್ಸಾಹಕ್ಕೆ ಇಂಬು ನೀಡುವಂತೆ ರಿಸೆಪ್ಷನ್‌ನಲ್ಲಿದ್ದ ಸ್ವಾಗತಗಾರ್ತಿ ರೊಬೋ, ಅವಿರತ್ ಕಚೇರಿಯಲ್ಲಿರುವನೆಂದು ಅರುಹಿ ಆತನ ಕ್ಯಾಬಿನ್‌ಗೆ ಹೋಗುವ ದಾರಿಯನ್ನು ತೋರಿಸಿತ್ತು.

ನಿಯಂತ್ರಣ ಕೇಂದ್ರದ ಅನೆಕ್ಸ್ ಕಟ್ಟಡದಲ್ಲಿದ್ದ ಈ ವಿಭಾಗವನ್ನು ಎರಡು 'ವಿಂಗ್'ಗಳಾಗಿ ವಿಭಜಿಸಲಾಗಿತ್ತು. ಒಂದನ್ನು ಸಂಶೋಧನೆಗಾಗಿ ಮೀಸಲಾಗಿದ್ದರೆ, ಮತ್ತೊಂದು ಕೇಂದ್ರ ತನಿಖಾ ತಂಡಗಳ ಕಚೇರಿಯಾಗಿತ್ತು. ಅವಳು ಅವಿರತ್ ಇದ್ದ ಕ್ಯಾಬಿನ್‌ನ ಬಾಗಿಲನ್ನು ತೆರೆದು ಒಳಹೋಗುತ್ತಿದ್ದಂತೆ ವರ್ಕ್ ಸ್ಟೇಷನ್‌ನಲ್ಲಿ ಕುಳಿತಿದ್ದ ಅವಿರತ್ ತನ್ನ ತಲೆ ಮೇಲೆತ್ತದೆಯೇ 'ಬನ್ನಿ, ಹನ್ನಾ ಮ್ಯಾಮ್' ಎಂದು ಉಲಿದಿದ್ದ! ಆಗ ಅಚ್ಚರಿ ಪಡುವ ಸರದಿ ಹನ್ನಾಳದಾಗಿತ್ತು. ಕೆಲಕ್ಷಣ ದಿಙ್ಮೂಢಳಾಗಿ ನಿಂತಿದ್ದ ಅವಳು ನಂತರ ಸಾವರಿಸಿಕೊಂಡು ಅವನ ಸಮೀಪ ಹೋಗುತ್ತಲೇ ಅವನು ತಲೆ ಮೇಲೆತ್ತಿ ಅವಳೆಡೆ ನಸುನಗು ಬೀರಿದ್ದ.

'ನಾನು ಬಂದಿರುವ ಸುಳಿವು ನಿಮಗೆ ಗೊತ್ತಾದದ್ದು ಹೇಗೆ?'

'ಈಗಾಗಲೇ ನಾವಿಬ್ಬರೂ ಒಂದೆರಡು ಬಾರಿ ಸಂಧಿಸಿರುವುದರಿಂದ ನಿಮ್ಮ ದೇಹದಿಂದ ಹೊರಹೊಮ್ಮುವ ಸುಗಂಧವನ್ನು ಗುರುತಿಸಬಲ್ಲವನಾಗಿದ್ದೇನೆ' ಎಂದು ಹುಬ್ಬೇರಿಸಿ ಮಾರ್ಮಿಕವಾಗಿ ನುಡಿದ ಅವನ ಮಾತನ್ನು ನಂಬುವಂತಿರಲಿಲ್ಲ. ಅವನ ಮಾತು ಸುಳ್ಳೆಂಬಂತೆ ತಲೆಯಾಡಿಸಿದಳು.

ಆಗ ಅವನು ವಿಷಯ ಬಚ್ಚಿಡುವುದರಲ್ಲಿ ಏನೂ ಪ್ರಯೋಜನವಿಲ್ಲವೆಂದು, 'ನೀವು ನನ್ನ ಕ್ಯಾಬಿನ್ ಕಡೆ ಪ್ಯಾಸೇಜ್ ಮೂಲಕ ನಡೆದು ಬರುವಾಗಲೇ ಅಲ್ಲಿ ಇರಿಸಲಾದ ಕಣ್ಗಾವಲು ಕ್ಯಾಮೆರಾ ನಿಮ್ಮ ಬರುವನ್ನು ನನಗೆ ತೋರಿಸಿತ್ತು' ಎಂದ.

'ಓ... ಅಂದುಕೊಂಡೆ' ದೀರ್ಘವಾಗಿ ಮಾತು ಎಳೆದಳು. ಅವಳು ಅವನೆದುರಿಗಿನ ಕುರ್ಚಿಯಲ್ಲಿ ಆಸೀನಳಾದಾಗ ಅವಿರತ್ ಅವಳ ಬರುವಿಗೆ ಕಾರಣ ಕೇಳಿದ.

'ಏನು... ಮ್ಯಾಮ್ ಅವರ ಸವಾರಿ ಈ ಕಡೆಗೆ?'

'ನನ್ನ ತಿಂಗಳ ಕಾರ್ಯ ಪರಿಶೀಲಿಸುವುದಿತ್ತು. ನಿಯಂತ್ರಣ ಕೇಂದ್ರಕ್ಕೆ ಭೇಟಿ ಇತ್ತಾಗ ಹೇಗೂ ನಿಮ್ಮ ಕಚೇರಿ ಸಮೀಪದಲ್ಲೇ ಇದ್ದಿದ್ದರಿಂದ ಇಲ್ಲಿಗೆ ನಿಮ್ಮನ್ನು ಕಾಣಲು ಬಂದೆ'.

'ಅಂತೂ ನಿಮ್ಮ ರಸ್ತೆಯ ಕಾರುಬಾರಿನ ಮಧ್ಯೆ ನನ್ನ ನೆನಪಾಯಿತು. ಬಹಳ ಸಂತೋಷ'.

ತಿಂಡಿ ಮೆಲ್ಲುತ್ತಾ ಕುಶಲೋಪರಿ ಮಾತನಾಡುತ್ತಿದ್ದಾಗ, ನಿಯಂತ್ರಣ ಕೇಂದ್ರದ ಮುಖ್ಯಸ್ಥ ಹೇಳಿದಂತೆ ಚಾಲಕನ ವರ್ತನೆ ಹಾಗೂ ಅಪಘಾತಗಳ ಕುರಿತು ನಡೆಯುತ್ತಿರುವ ಸಂಶೋಧನೆಯ ಕಡೆ ವಿಷಯ ತಿರುಗಿತ್ತು.

'ಬಿಹೇವ್ಯರಲ್ ಸೈನ್ಸ್ ಹಿಂದೆಂದಿಗಿಂತಲೂ ಸಂಶೋಧಕರ ಕುತೂಹಲದ ವಸ್ತುವಾಗಿದೆ. ಅಪಘಾತಗಳಲ್ಲಿ ಸಣ್ಣ ವಯಸ್ಸಿನವರು ಒಳಗೊಳ್ಳುವುದಕ್ಕೂ, ಮಧ್ಯ ವಯಸ್ಸಿನವರು ಒಳಗೊಳ್ಳುವುದಕ್ಕೂ ವ್ಯತ್ಯಾಸವಿದೆ. ಈ ಸ್ವಭಾವವೇ ಅನೇಕ ಅಪಘಾತಗಳಿಗೆ ಕಾರಣವಾಗಿರುವುದರಿಂದ, ಈ ಸಂಶೋಧನೆಯ ಫಲವಾಗಿ ಅವರ ಮೆದುಳಿನ ಕ್ರಿಯೆಯಲ್ಲಿ ಬದಲಾವಣೆ ತರುವುದು ಅಥವಾ ಕ್ಷಣಾರ್ಧದಲ್ಲಾಗುವ ಅವರ ಆತುರದ ವರ್ತನೆಯನ್ನು ಅದುಮಿಡಲಿಕ್ಕೆ ಯಾವುದಾದರೂ ಉಪಕರಣ ಕಂಡು ಹಿಡಿದರೆ ಅಪಘಾತಗಳಲ್ಲಿ ಗಾಯಗೊಳ್ಳುವವರ ಹಾಗೂ ಸಾಯುವವರ ಸಂಖ್ಯೆ ಗಣನೀಯವಾಗಿ ಕಡಿಮೆಯಾಗುತ್ತದೆ'.

'ಅಕ್ಷರ ಸಹ ನಿಜ.'

'ಹೇಗೂ ಇಲ್ಲಿಯವರೆಗೂ ಬಂದಿರುವಿರಿ. ಆರ್ ಆಂಡ್ ಡಿ ವಿಭಾಗಕ್ಕೂ ಭೇಟಿ ನೀಡಿ. ಅಲ್ಲಿಗೆ ನಾನೇ ಕರೆದೊಯ್ತೀನಿ' ಎಂದು ಎದ್ದಾಗ ಅವನೊಂದಿಗೆ ಅವಳೂ ಹೆಜ್ಜೆ ಹಾಕಿದಳು. ಪಕ್ಕದಲ್ಲಿಯೇ ಇದ್ದ 'ವಿಂಗ್'ಗೆ ಪ್ಯಾಸೇಜ್ ಮೂಲಕ ಕರೆದೊಯ್ದ. ಅವಿರತ್ ನೇರವಾಗಿ ತಲುಪಿದ್ದು, 'ಎಕ್ಸ್‌ಪೆರಿಮೆಂಟಲ್ ಕೊಠಡಿ'ಯನ್ನು. ಒಳಗೆ ಅನಧಿಕೃತ ವ್ಯಕ್ತಿಗಳ ಪ್ರವೇಶ ನಿಷೇಧಿಸಲ್ಪಟ್ಟಿದ್ದರಿಂದ ಅವಿರತ್ ಅಲ್ಲಿನ ಮುಖ್ಯಸ್ಥನಲ್ಲಿ ಪಾಸ್ ಪಡೆದೇ ಬಂದಿದ್ದ. ಕೊಠಡಿಯ